**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ.51/2015.**

ದಿನಾಂಕಃ**26-09-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಎನ್ ಎನ್ ಗುರುಸಿದ್ದಪ್ಪ | ಚಾಸಾ-15<br>ಪ್ರಾಸಾ-11 |
| ತಂದೆಯ ಹೆಸರು | ನಿಂಗಪ್ಪ | |
| ವಯಸ್ಸು | 73 ವರ್ಷ | |
| ಉದ್ಯೋಗ | ನಿವೃತ್ತ ಎ ಎಸ್ ಐ | |
| ವಾಸ | ಚಿಕ್ಕಮಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2011 ರ ಜುಲೈನಿಂದ 2013 ರ ಜೂನ್ ವರೆಗೆ ಕಡೂರು ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ10.12.2012 ರಂದು ಬೆಳಗ್ಗೆ 8 ಗಂಟೆಯಲ್ಲಿ ಚಾಸಾ 17 ರವರು ನನ್ನನ್ನು ಕರೆದು ಕಡತವನ್ನು ನನಗೆ ನೀಡಿರುತ್ತಾರೆ ಹಾಗೂ ನಾನು ತನಿಖೆ ಮುಂದುವರೆಸಿರುತ್ತೇನೆ ಹಾಗೂ ಅದೇ ದಿನ ಬೆಂಗಳೂರಿಗೆ ಹೋಗಿ ಚಾಸಾ 17 ರವರ ಆದೇಶದಂತೆ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಅಮಾನತ್ತು ಪಡಿಸಿಕೊಳ್ಳಲು ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳ ನಿಯಮಿತ ಬೆಂಗಳೂರು - ಈ ವಿಳಾಸಕ್ಕೆ ಇಬ್ಬರು ಪಂಚರೊಂದಿಗೆ ಹೋಗಿರುತ್ತೇನೆ. ಸದರಿ ಸ್ಥಳದಲ್ಲಿ ಮಧ್ಯಾಹ್ನ 4 ಗಂಟೆಯಲ್ಲಿ ಚಾಸಾ 10, 11 ರವರ ಸಮಕ್ಷಮ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಳಿ ನಿಯಮಿತದ ಅಧ್ಯಕ್ಷರಾದ ಕೆ ನಾಗರಾಜು ರವರನ್ನು ಭೇಟಿ ಮಾಡಿ ಈ ಕೇಸಿಗೆ ಸಂಬಂಧಪಟ್ಟಂತೆ ಲೋನ್ ಮಾಡಿರುವ ದಾಖಲೆಗಳನ್ನು ಹಾಜರುಪಡಿಸುವಂತೆ ಕೇಳಿ, ಸದರಿಯವರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿ ಮಧ್ಯಾಹ್ನ 4.30 ರಿಂದ 5.15 ಗಂಟೆಯವರೆಗೂ ಒಟ್ಟು 11 ದಾಖಲೆಗಳನ್ನು ಪಂಚರ ಸಮಕ್ಷಮ ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ ಮತ್ತು ಫೋಟೋ ತೆಗೆಸಿರುತ್ತೇನೆ. ಸದರಿ 11 ದಾಖಲೆಗಳನ್ನು ಸಾಕ್ಷಿಯು ಈ ದಿನ ನೋಡಿ ಗುರುತಿಸಿರುತ್ತಾರೆ, ಸದರಿ ದಾಖಲೆಗಳನ್ನು ಈಗಾಗಲೇ ನಿಪಿ

21 ರಿಂದ 32 ಎಂದು ಗುರತಿಸಲಾಗಿರುತ್ತದೆ, ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ 21(ಎ) ನಿಂದ 32(ಎ) ವರೆಗೂ ಗುರುತಿಸಲಾಯಿತು.

ಸಾಕ್ಷಿಯು ಅಮಾನತ್ತು ಮಹಜರನ್ನು ಮತ್ತು ಅದರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 20 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ20(ಬಿ) ಎಂದು ಗುರುತಿಸಲಾಯಿತು.

ಮಹಜರ್ ಕಾಲದಲ್ಲಿ ಸದರಿ 11 ದಾಖಲೆಗಳಲ್ಲಿ ಕ್ರ.ಸಂ.1, 6, 10 ನ್ನು ಒಂದು ಕವರಿನಲ್ಲಿ, ಕ್ರ.ಸಂ.2 ರಿಂದ 5, 7 ರಿಂದ 9 ಮತ್ತು 11 ನ್ನು ಇನ್ನೊಂದು ಕವರಿನಲ್ಲಿ ಹಾಕಿರುತ್ತೇನೆ ಹಾಗೂ ಸದರಿ 2 ಕವರುಗಳನ್ನು ಒಂದು ಲಕೋಟೆಯ ಒಳಗೆ ಹಾಕಿ ಪಿ ಎಂ ಅಕ್ಷರದಿಂದ ಹರಗು ಸೀಲ್ ಮಾಡಿರುತ್ತೇನೆ.

ನಂತರ ದಾಖಲಾತಿ ಹಾಜರುಪಡಿಸಿದ ಸಾಕ್ಷಿದಾರರಾದ ಕೆ.ನಾಗರಾಜು ರವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

ನಂತರ, ಠಾಣೆಗೆ ಹಿಂದಿರುಗಿ ಬಂದು ದಿಃ11.12.2012 ರಂದು ಠಾಣಾ ಸ್ವತ್ತು ಪಟ್ಟಿಯಲ್ಲಿ ಅಮಾನತ್ತು ಪಡಿಸಿಕೊಂಡ ಸ್ವತ್ತಿನ ಬಗ್ಗೆ ನಮೂದು ಮಾಡಿ ಸ್ವತ್ತು ಪಟ್ಟಿ ಸಂ.137/2012 ಅನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ 17 ರವರಿಗೆ ಹಸ್ತಾಂತರಿಸಿರುತ್ತೇನೆ.

<u>ಪಾಟೀಸವಾಲುಃ ಆರೋಪಿ ಪರ ಃ-</u> ಆರೋಪಿತರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.